# ಸಿನಿಮಾ ಒಲುಮೆಯ ನಲ್ಕೆ



**ಧಾರಾವಾಹಿ ಸಹಾಯಕ ನಿರ್ದೇಶಕಿ, ನಟಿಯಾಗಿ ಗುರುತಿಸಿಕೊಂಡಿರುವ ತೃಪ್ತಿ ಸುಂದರ್ ಅಭಿಕಾರ್, ಸಿನಿಮಾ ಪ್ರಯೋಗಕ್ಕಿಳಿದಿದ್ದಾರೆ. 'ನಲ್ಕೆ' ಸಿನಿಮಾ ಮೂಲಕ ಬದುಕಿನ ಬಣ್ಣಗಳನ್ನೂ ತೆರೆದಿಟ್ಟಿರುವುದಾಗಿ ಹೇಳಿದ್ದಾರೆ.**

■ ಸುಮಲತಾ ಎನ್.

ಸಾಹಿತ್ಯದೆಡೆಗಿನ ಪ್ರೀತಿ, ತಮ್ಮ ನೆಲದ ಕಲೆ ಬಿತ್ತಿದ್ದ ಬಣ್ಣದ ಕನಸುಗಳಿಗೆ 'ಸಿನಿಮಾ' ರೂಪ ನೀಡಿರುವವರು ತೃಪ್ತಿ ಸುಂದರ್ ಅಭಿಕಾರ್. ಧಾರಾವಾಹಿಗಳಲ್ಲಿ ಸಹಾಯಕ ನಿರ್ದೇಶಕಿಯಾಗಿ, ನಟಿಯಾಗಿ ಗಳಿಸಿಕೊಂಡ ಅನುಭವಗಳನ್ನೇ ಬುನಾದಿಯಾಗಿಟ್ಟುಕೊಂಡು ಹೊಸ ಧಾಟಿಯ ಸಿನಿಮಾ ನೀಡಬೇಕೆನ್ನುವ ಆಶಯದೊಂದಿಗೆ ಪ್ರಯೋಗಮುಖಿಯಾಗಿ ಸಾಗಿದ್ದಾರೆ ಅವರು.

ದಕ್ಷಿಣ ಕನ್ನಡದ ಪುತ್ತೂರಿನವರಾದ ತೃಪ್ತಿ ಅವರಿಗೆ ಚಿಕ್ಕಂದಿನಿಂದ ಪುಸ್ತಕ ಓದುವ ಗೀಳು. ಯಾರ ಮನೆಗೇ ಹೋಗಲಿ, ಅಟ್ಟ ಸೇರಿದ ಹಳೇ ಪೇಪರ್, ಕಥೆ ಪುಸ್ತಕಗಳಲ್ಲಿ ಕಳೆದುಹೋಗುತ್ತಿದ್ದ ಅವರಲ್ಲಿ ತಮ್ಮೂರಿನ ಕಲಾ ಪ್ರಕಾರಗಳು ಇನ್ನಷ್ಟು ಸೋಜಿಗ ಮೂಡಿಸಿದ್ದವು. ಜೊತೆಗೆ, ಸಿನಿಮಾದೆಡೆಗೂ ಸಣ್ಣದೊಂದು ಸೆಳೆತ. ಇವೆಲ್ಲವೂ ಸೇರಿ ಅವರಲ್ಲಿ ಬಣ್ಣದ ಹೊಸ ಹೊಸ ಕನಸುಗಳನ್ನೂ ಸೃಷ್ಟಿಸಿದ್ದವು.

ತೃಪ್ತಿ ಅವರು ಓದಿದ್ದು ಬಿಎಸ್ಸಿ ಕಂಪ್ಯೂಟರ್ ಸೈನ್ಸ್. ಆದರೆ ಕ್ರಿಯಾಶೀಲತೆಗೆ ತುಡಿಯುತ್ತಿದ್ದ ಮನಸ್ಸು ಕಂಪ್ಯೂಟರ್ ಕಡೆ ವಾಲದೇ, ಪತ್ರಿಕೋದ್ಯಮದತ್ತ ಸಾಗಿತ್ತು. ತಮ್ಮ ಕ್ರಿಯಾಶೀಲತೆಗೆ ಒತ್ತು ನೀಡುವಂತೆ, 'ಸಿನಿಮಾ ಮೇಕಿಂಗ್' ವಿಷಯದಲ್ಲಿಯೇ ಸ್ನಾತಕೋತ್ತರ ಪದವಿ ಪಡೆದ ಅವರು, ಓದಿನ ಆ ಎರಡು ವರ್ಷಗಳಲ್ಲಿ ಸಿನಿಮಾ ಮಾಧ್ಯಮದ ಮೂಲ ತಂತ್ರಗಳನ್ನು ಕಲಿತರು.

ಓದು ಮುಗಿಸಿದ ಅವರ ದಾರಿ ಹೊರಳಿದ್ದು ಧಾರಾವಾಹಿ ಕಡೆಗೆ. ನಿರ್ದೇಶಕ ಟಿ.ಎನ್. ಸೀತಾರಾಮ್ ಅವರೊಂದಿಗೆ ಎರಡೂವರೆ ವರ್ಷ ಸಹಾಯಕ ನಿರ್ದೇಶಕಿಯಾಗಿ ಕೆಲಸ ಮಾಡಿದ ಅವರು, ನಟನೆಯಲ್ಲೂ ತೊಡಗಿಕೊಂಡರು. ಇದರೊಂದಿಗೆ ವಾರ್ತಾ ಇಲಾಖೆಗೆ ಕಿರುಚಿತ್ರಗಳನ್ನು, ಆ್ಯಡ್ ಶೂಟ್‌ಗಳನ್ನು ಮಾಡುತ್ತಿದ್ದುದು ಅವರಲ್ಲಿನ ಸೃಜನಶೀಲತೆಯನ್ನು ಚುರುಕುಗೊಳಿಸಿತ್ತು. ಅವರೊಳಗಿದ್ದ ಬರಹದ ಆಸಕ್ತಿಗೆ ಅವಕಾಶ ನೀಡಿದ್ದು 'ಪ್ರೀತಿ ಎಂಬ ಮಾಯೆ' ಧಾರಾವಾಹಿ. ಸುನೀಲ್ ಕುಮಾರ್ ಸಿಂಗ್ ಅವರ




ಧಾರಾವಾಹಿಯಲ್ಲಿ ಮೂರು ವರ್ಷ ಸ್ಕ್ರಿಪ್ಟ್ ರೈಟರ್ ಆಗಿದ್ದು, ಅವರ ಅನುಭವವನ್ನು ಇನ್ನಷ್ಟು ಹಿಗ್ಗಿಸಿತ್ತು.

ನಿರ್ದೇಶಕ ಬಿ.ಎಂ. ಗಿರಿರಾಜ್ ಅವರ ಎರಡು ಸಿನಿಮಾದಲ್ಲಿ ಕ್ಯಾಮೆರಾ ಅಸಿಸ್ಟೆಂಟ್ ಆಗಿಯೂ ಕೆಲಸ ಮಾಡಿದರು ತೃಪ್ತಿ. ಇದು ಅವರಲ್ಲಿನ ಆತ್ಮವಿಶ್ವಾಸವನ್ನು ಇನ್ನಷ್ಟು ಗಟ್ಟಿಗೊಳಿಸಿತು. ಅದಾಗಲೇ ನಿರ್ದೇಶಕಿಯಾಗಬೇಕೆಂಬ ಸಣ್ಣ ಹಟವೊಂದು ಅವರೊಳಗೆ ಗಟ್ಟಿಯಾಗುತ್ತಿತ್ತು.

'ಟಿ.ಎನ್. ಸೀತಾರಾಮ್ ಹಾಗೂ ಗಿರಿರಾಜ್ ಅವರೊಂದಿಗೆ ಕೆಲಸ ಮಾಡಿದ ಅನುಭವ ಅದ್ಭುತ. ಇವರಿಂದ ಕಲಿತದ್ದು ಬಹಳಷ್ಟು. ಧಾರಾವಾಹಿಯಲ್ಲಿ ಸೀತಾರಾಮ್ ಸರ್, ಕ್ಯಾರೆಕ್ಟರ್‌ಗಳನ್ನು ಬ್ಯಾಲೆನ್ಸ್ ಮಾಡುತ್ತಿದ್ದ ರೀತಿ ಅಚ್ಚರಿ ಎನಿಸುತ್ತಿತ್ತು. ಓದಿನಲ್ಲಿ, ತಾಂತ್ರಿಕವಾಗಿ ಕೆಲವು ವಿಷಯಗಳನ್ನು ಕಲಿತುಬಿಡಬಹುದು. ಆದರೆ ಸೆಟ್‌ನಲ್ಲಿ ಹೇಗೆ ನಡೆದುಕೊಳ್ಳಬೇಕು, ನಮ್ಮೊಂದಿಗಿರುವವರನ್ನು, ಪರಿಸ್ಥಿತಿಯನ್ನು ಹೇಗೆ ಹ್ಯಾಂಡಲ್ ಮಾಡಬೇಕು ಎಂಬುದನ್ನು ಕಲಿಯಲು ಸಾಧ್ಯವಾಗುವುದೇ ಅನುಭವದಿಂದ. ದೊಡ್ಡ ನಿರ್ದೇಶಕರು ಅದ್ಭುತಗಳನ್ನೇ ಕಲಿಸಬೇಕು ಎಂದೇನಿಲ್ಲ. ಚಿಕ್ಕಪುಟ್ಟ ಸಂಗತಿಗಳು ಕೂಡ ಹೊಸಬರ ಬದುಕಿಗೆ ದೊಡ್ಡ ವಿಷಯವೇ' ಎನ್ನುತ್ತಾರೆ ತೃಪ್ತಿ.

ಸುಮಾರು 15 ವರ್ಷಗಳಿಂದ, ನಿರ್ದೇಶಕಿಯಾಗಬೇಕೆಂಬ ಕನಸನ್ನು ಪೋಷಿಸುತ್ತಾ ಬಂದಿದ್ದ ಅವರು, ಇದೀಗ ಆ ಕನಸನ್ನು